(ಇಂದು ದಿನಾಂಕ:28-10-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನಾನು ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಪ್ರಸ್ತುತ ದಾವೆಯು ಎರಡನೇ ದಾವೆ ಆಗಿರುತ್ತದೆ ಎಂದರೆ ಸರಿ. ಮೊದಲು ನಾನು ಪ್ರತಿವಾದಿಯರ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದನ್ನು ಸಲ್ಲಸಿದ್ದೆ ಎಂದರೆ ಸರಿ. ನಾನು ಪ್ರತಿವಾದಿಯರ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದರಲ್ಲಿ ಅವರು ತೊಂದರೆ ಕೊಡುತ್ತಿದ್ದಾರೆ ಅದಕ್ಕಾಗಿ ವ್ಯಾಜ್ಯಕ್ಕೆ ಕಾರಣ ದಿಃ 28-11-2008 ರಂದು ಉಂಟಾಗಿದೆ ಎಂದು ನಾನು ತೋರಿಸಿರುತ್ತೇನೆ ಎಂದರೆ ಸರಿ.

2. ನಾನು ಪ್ರತಿವಾದಿಯರ ವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದರಲ್ಲಿ ನಾನು ಪ್ಲಾಟಿನ ಮಾಲೀಕ ಮತ್ತು ಸ್ವಾಧೀನದಾರರು ಎಂದು ಹೇಳಿಕೊಂಡಿರುತ್ತೇನೆ ಎಂದರೆ ಸರಿ. ನಾನು ಪ್ರತಿವಾದಿಯರ ವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದು 15-12-2018 ರಲ್ಲಿ ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ಲಾಟ ನಂ.35 ಅದರ ಸರ್ವೇ ನಂ. 777/2 ಸಿಂಧನೂರು ಗ್ರಾಮದ್ದು ಎಂದರೆ ಸರಿ. ನಾನು ಪ್ರತಿವಾದಿಯರ ವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದನ್ನು ಸಲಿಸ್ಲಿಸಿದ್ದು ಅದೇ ಪ್ರತಿವಾದಿಯ ವಿರುದ್ದ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಪ್ರತಿವಾದಿಯರ ವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದರ ದಾವೆಯ ಚಕಬಂದಿ ಮತ್ತು ಪ್ರಸ್ತುತ ದಾವೆಯ ಚಕಬಂದಿ ಒಂದೇ ಎಂದರೆ ಸರಿ.

3. ಪ್ರತಿವಾದಿಯು ನಾನು ಪ್ರತಿವಾದಿಯರ ವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದರಲ್ಲಿ ಪ್ರತಿವಾದ ಪತ್ರ ಮತ್ತು ಪ್ರಸ್ತುತ ದಾವೆಯಲ್ಲಿಯೂ ಅವರು ಪ್ರತಿವಾದ ಪತ್ರವನ್ನು ಅವರು ಸಲ್ಲಿಸಿದ್ದಾರೆ. ನಾನು ಪರಮಶಿವಯ್ಯ ಇವರ ಬಳಿ 2007 ರಲ್ಲಿ ಆಸ್ತಿ ಖರೀದಿ ಮಾಡಿದ್ದೇನೆ ಎಂದು ಹೇಳಿಕೊಂಡಿದ್ದೇನೆ ಎಂದರೆ ಸರಿ. ನಮಗಿಂತ ಪೂರ್ವದಲ್ಲಿಯೇ ಪ್ರತಿವಾದಿ ಪರಮಶಿವಯ್ಯ ಬಳಿ ಖರೀದಿ ಮಾಡುವ ಪೂರ್ವದಲ್ಲಿ ಖರೀದಿ ಕರಾರು ಪತ್ರವನ್ನು 1992 ನೇ ಸಾಲಿನಲ್ಲಿ ಮಾಡಿದ್ದಾರೆ ಮತ್ತು ಅದರ ಬಗ್ಗೆ ಪ್ರತಿವಾದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂದರೆ ಸರಿಯಲ್ಲ.

4. ಪ್ರತಿವಾದಿಯು ಅವರ ಪರ ಇದ್ದ ಖರೀದಿ ಪತ್ರದ ಆಧಾರದ ಮೇಲೆ 2000 ಸಾಲಿನಲ್ಲಿಯೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ಪ್ರತಿವಾದಿ ಖರೀದಿಸಿದ ಪ್ಲಾಟ ನಂಬರ, ಚಕಬಂದಿ ಮತ್ತು ವಿಸ್ತೀರ್ಣ ಒಂದೇ ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಅವರ ಪರ ಇದ್ದ ಖರೀದಿ ಪತ್ರದ ಆಧಾರದ ಮೇಲೆ ಅವರೇ ಭೂ ಕಂದಾಯ ಕಟ್ಟುತ್ತಿದ್ದಾರೆ ಎಂದರೆ

ಸರಿಯಲ್ಲ. ಪ್ರತಿವಾದಿಯು ಅವರ ಪರ ಇದ್ದ ಖರೀದಿ ಪತ್ರದ ಆಧಾರದ ಮೇಲೆ ತನ್ನ ಪರ ಮ್ಯೂಟೇಶನ್ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

5. ನಾನು ಪ್ರತಿವಾದಿಯರ ವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಂಧನೂರಿನಲ್ಲಿ ಅಸಲು ದಾವಾ ನಂ. 252/2008 ನೇದ್ದರಲ್ಲಿಘೋಷಣಾತ್ಮಕ ಪರಿಹಾರ ಕೋರಲು ನನಗೆ ಅವಕಾಶ ಇದ್ದರೂ ಕೂಡಾ ನಾನು ಕೇಳಿಲ್ಲ ಎಂದರೆ ಸರಿಯಲ್ಲ. ಪರಮಶಿವಯ್ಯ ನನಗಿಂತ ಪೂರ್ವದಲ್ಲಿಯೇ ಪ್ರತಿವಾದಿಗೆ ಮಾರಾಟ ಮಾಡಿದ ಪೂರ್ವದಲ್ಲಿಯೇ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನಗೆ ಪರಮಶಿವಯ್ಯ ಮಾರಾಟ ಮಾಡುವ ದಿನದಂದು ಅವರಿಗೆ ಮಾರಾಟ ಮಾಡುವ ಮಾಲೀಕತ್ವದ ಹಕ್ಕು ಇರಲಿಲ್ಲ, ಸತ್ಯನಾರಾಯಣ ಮಾಲೀಕರು ಮತ್ತು ಸ್ವಾಧೀನದಾರರು ಇದ್ದರು ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಅವರ ಕೋರಿಕೆಯಂತೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು